# ಯಶವಂತ ಚಿತ್ತಾಲರ 'ಶಿಕಾರಿ' ಒಂದು ಅವಲೋಕನ

ಪುಟ್ಟಸ್ವಾಮಿ

ಪ್ರಾಧ್ಯಾಪಕರು, ಪಿಜಿ ಸೆಂಟರ್, ಹೇಮಗಂಗೋತ್ರಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

DOI: https://doi.org/10.5281/zenodo.16678570

## ABSTRACT:

ಯಶವಂತ ಚಿತ್ತಾಲರ 'ಶಿಕಾರಿ'ಯ ಕೇಂದ್ರ ಪ್ರತಿಮೆ ಬೇಟೆ... ಇಂದಿನ ಔದ್ಯೋಗೀಕೃತ ನಾಗರಿಕತೆಯಲ್ಲಿ ಎಲ್ಲಿಯೂ ನೋಡಸಿಗುವ ಮನುಷ್ಯನಿಂದ ಮನುಷ್ಯನ ಬೇಟೆ 'ಶಿಕಾರಿ'ಯ ಕೇಂದ್ರ ವ್ಯಕ್ತಿ ನಾಗಪ್ಪ. ಇಲ್ಲಿ ಬೇಟೆಯ ಗುರಿ ಸ್ವಾರ್ಥ, ಸ್ವಹಿತ ರಕ್ಷಣೆಗಳ ಉದ್ದೇಶಗಳಿಂದ ಒಂದಾದ ಬೇಟೆಗಾರರ ತಂಡವೇ ಅದನ್ನು ಬೆನ್ನು ಹತ್ತುತ್ತದೆ. ಅವನ ಅಸ್ತಿತ್ವದ ಬೇರುಗಳನ್ನೇ ಅಲುಗಾಡಿಸಿ ಅವನ ನಾಶಕ್ಕಾಗಿ ಹೊಂಚುಹಾಕುತ್ತದೆ. ಇಂತಹ ಒಂದು ಸನ್ನಿವೇಶದಲ್ಲಿ ಮನುಷ್ಯನ ಬಾಳಿಗೆ ಅರ್ಥವಿದೆಯೇ? ಇದರಿಂದ ಪಾರಾಗಿ ಬದುಕುವ ಸಾಧ್ಯತೆಗಳಿವೆಯೇ, ಇಂತಹ ಸನ್ನಿವೇಶ ಹುಟ್ಟಿತಾದರೂ ಹೇಗೆ? ಅದಕ್ಕೆ ಹೊಣೆಗಾರರು ಯಾರು? ಎನ್ನುವ ಮೂಲಭೂತ ಪ್ರಶ್ನೆಗಳನ್ನು ಎತ್ತುವುದರ ಮೂಲಕ 'ಶಿಕಾರಿ' ನಮಗೆ ಅತ್ಯಂತ ಪ್ರಸ್ತುತವಾದ ಕೃತಿಯಾಗಿದೆ. ಕನ್ನಡದ ಮಟ್ಟಿಗೆ ತೀರಾ ಹೊಸ ವಸ್ತುವನ್ನು ಆಯ್ದುಕೊಂಡ ಚಿತ್ತಾಲರು ಅದನ್ನು ಬಹುಸಮರ್ಥವಾಗಿ ನಿರ್ವಹಿಸಿದ್ದಾರೆ. (ಡಾ. ಜಿ.ಎಸ್. ಅಮೂರ) ಅವರು ಕೃತಿಯ ಹಿನ್ನುಡಿಯಲ್ಲಿ ಆಡಿದ ಮಾತು ಕೃತಿಯ ಕುರಿತಾಗಿ ಅತ್ಯಂತ ಯೋಗ್ಯವಾದ ಮಾತಾಗಿದೆ. ಯಶವಂತ ಚಿತ್ತಾಲರ ಕೃತಿಗಳ ಮುಖ್ಯ ಭೂಮಿಕೆ ಅವರ ಹುಟ್ಟೂರು ಹನೇಹಳ್ಳಿ ಹಾಗೂ ಮುಂದೆ ಉದ್ಯೋಗಶೀಲರಾಗಿ ಬಾಳಿದ ಅವರ ಕರ್ಮಭೂಮಿ ಮುಂಬಯಿ. 'ಶಿಕಾರಿ'ಯಲ್ಲಿನ ಅವರ ಪಾತ್ರಗಳಾದ ನಾಗಪ್ಪನೂ ಹನೇಹಳ್ಳಿಯಲ್ಲಿ ಹುಟ್ಟಿ ಮುಂಬಯಿಯನ್ನು ಕರ್ಮಭೂಮಿಯನ್ನಾಗಿ ಮಾಡಿಕೊಂಡವನು.

## KEYWORDS:

ಶಿಕಾರಿ, ನಾಗಪ್ಪ, ಚಿತ್ತಾಲ, ಬೇಟೆ, ಹನೇಹಳ್ಳಿ, ಕರ್ಮಭೂಮಿ.

ತಮ್ಮೆಲ್ಲ ಬರಹಗಳಲ್ಲಿ, ಕೃತಿಗಳಲ್ಲಿ ಯಶವಂತ ಚಿತ್ತಾಲರು ನವ್ಯದ "ಅಸ್ತಿತ್ವವಾದ ಮತ್ತು ವ್ಯಕ್ತಿವಾದ ಸಿದ್ಧಾಂತಗಳ ನೆಲೆಗಟ್ಟಿನಲ್ಲಿ ವ್ಯಕ್ತಿಯನ್ನು ಶೋಧಿಸಿದ್ದಾರೆ. ಯಶವಂತ ಚಿತ್ತಾಲರು ನವ್ಯದ ನೆಲೆಗಳಾದ ಅಸ್ತಿತ್ವವಾದ ಅಥವಾ ವ್ಯಕ್ತಿವಾದದ ಸಿದ್ಧಾಂತಕ್ಕೆ ಭಾರತೀಯವಾದ ಜೈನ ಸಿದ್ಧಾಂತಗಳ ಪರಿಕಲ್ಪನೆಯ 'ಬೇಟೆ'ಯ ಪರಿಕಲ್ಪನೆಯನ್ನು ಜೊತೆಗೂಡಿಸಿದರು. ಮನುಷ್ಯನ ನಗರೀಕರಣಗೊಂಡ ಬದುಕಿನ ಅಸ್ತಿತ್ವದ ಶೋಧಕ್ಕೆ 'ಅಸ್ತಿತ್ವವಾದ' ನೆಲೆಯೊಂದಿಗೆ, ಈ 'ಬೇಟೆ'ಯ

ಪರಿಕಲ್ಪನೆ ಅರ್ಥವತ್ತಾಗಿ ಜೊತೆಗೂಡುತ್ತದೆ. ಈ ನೆಲೆಯಲ್ಲಿ ವ್ಯಕ್ತಿಯ ನಿಜದ ಶೋಧವನ್ನೂ, ಬದುಕಿನ ಅರ್ಥದ ಶೋಧವನ್ನು ಚಿತ್ತಾಲರು ತಮ್ಮ ಸೃಜನಶೀಲ ಬರಹಗಳಲ್ಲಿ ಶೋಧಿಸುತ್ತಾರೆ.

**ಕಾದಂಬರಿಯ ವಸ್ತುವಿಶ್ಲೇಷಣೆ:**

ಮನುಷ್ಯನ ಅಸ್ತಿತ್ವದ ನೆಲೆಯನ್ನು ಕಂಡುಕೊಳ್ಳಲು, ಅವನನ್ನು ಅರ್ಥೈಸಿ, ವಿವರಿಸಲು ಮನೋವಿಶ್ಲೇಷಣಾ ವಿಧಾನವೂ ಬಹಳ ಮುಖ್ಯವಾದದ್ದು. ಮನುಷ್ಯನ ಪ್ರಜ್ಞೆಯನ್ನು ಅವನ ಪರಿಸರ, ಅನುಭವಗಳು ರೂಪಿಸುತ್ತವೆ – ಎನ್ನುವ ತಿಳುವಳಿಕೆಯಂತೆ, ಅವನ ಪರಿಸರ, ಅದರ ಅನುಭವಗಳು ವ್ಯಕ್ತಿಯ ಪ್ರಜ್ಞೆಯನ್ನೂ, ಅವನ ಬದುಕನ್ನು ಹೇಗೆ ರೂಪಿಸುತ್ತವೆ ಎನ್ನುವುದನ್ನು ಶೋಧಿಸುವುದೂ 'ಶಿಕಾರಿ'ಯ ಮುಖ್ಯ ಉದ್ದೇಶವಾಗಿದೆ. ವ್ಯಕ್ತಿಯ ಪರಿಸರ ಅವನನ್ನು ರೂಪಿಸಿದಂತೆಯೇ ಅವನ ಪ್ರಜ್ಞೆ – ತನ್ನ ಪರಿಸರದ ಅನುಭವಗಳಿಗೆ ಹೇಗೆ ಗ್ರಹಿಸಿ ಪ್ರತಿಕ್ರಿಯಿಸುತ್ತದೆ ಎನ್ನುವುದು ಮುಖ್ಯವಾಗುತ್ತದೆ.

ನಾಗಪ್ಪನಿಗೆ ಅವನ ಕಂಪೆನಿಯ ಪರ್ಸೊನಲ್ ಆ್ಯಂಡ್ ಅಡ್ಮಿನಿಸ್ಟ್ರೇಷನ್ – ಮ್ಯಾನೇಜರ್ ಕಡೆಯಿಂದ ಅದೊಂದು ಬೆಳಗು ದರ್ಖಾಸ್ತು ಬಂದ ಸಸ್ಪೆಂಡ್ ಆದೇಶದೊಂದಿಗೆ ಅವನ ಶಿಕಾರಿಯ ಪದರುಗಳು ಒಂದೊಂದಾಗಿ ತೆರೆದುಕೊಳ್ಳುತ್ತದೆ. ಅದರೊಂದಿಗೆ ಆಧುನಿಕ ಕಾರ್ಪೊರೇಟ್ ಜಗತ್ತಿನ ಮನುಷ್ಯ–ಮನುಷ್ಯನ ಬೇಟೆಯ ಭಿನ್ನವೂ, ಕ್ರೂರವೂ ಆದ ಮಜಲುಗಳು ಹಂತಹಂತವಾಗಿ ತೆರೆದುಕೊಳ್ಳುತ್ತದೆ. ಈ ಭಯಾನಕ ಅನುಭವಕ್ಕೆ, ಅದು ನೀಡುವ ದಿಗಿಲು, ಆತಂಕಗಳಿಗೆ ನಾಗಪ್ಪನಂತೆಯೇ ಅಸಹಾಯಕವೂ, ಸೂಕ್ಷ್ಮಸಂವೇದನೆ ಉಳ್ಳವರು ಭಯದಿಂದ ದಿಗ್ಭ್ರಮೆಗೊಳಗಾಗುತ್ತಾರೆ. ಈ ಜಗತ್ತು ತನ್ನ ಭಯಾನಕ ಆವರಣಗಳನ್ನು ಕಳಚಿಕೊಳ್ಳುತ್ತ ಸಾಗುವ ಪರಿಗೆ 'ವ್ಯಕ್ತಿಗೆ ಅಥವಾ ನಾಗಪ್ಪನಿಗೆ ಅದು ಪರಿಚಯಿಸುವ ತನ್ನ ಅರಿವು ಅದರ ಜ್ಞಾನಗಳು ಧನಾತ್ಮಕವಾಗಿರದೆ, ಋಣಾತ್ಮಕವಾದದ್ದು. ಇಲ್ಲಿ 'ಅರಿವು', 'ಜ್ಞಾನ'ಗಳ ಅನುಭವ ಆನಂದವಾಗಿರದೆ; ಅತ್ಯಂತ ದುಃಖದಾಯಕವೂ, ವೇದನೆಯಿಂದ ಕೂಡಿದ್ದೂ ಆಗಿದೆ. 'ಸತ್ಯದ ದರ್ಶನ ಸುಂದರವಾಗಿಯೂ, ಆನಂದವಾಗಿಯೂ ಇಲ್ಲದೆ, ಅದರ ವಿರುದ್ಧವಾಗಿ ಸತ್ಯ ಕುರೂಪವಾಗಿಯೂ, ಕ್ರೂರವಾಗಿಯೂ ಇರುತ್ತದೆ' ಎನ್ನುವ ಆಧುನಿಕ ಸಾಹಿತ್ಯ ಮೀಮಾಂಸೆಯ ವ್ಯಾಖ್ಯಾನ, ಅದರ ವ್ಯಕ್ತಿವಾದದ ನೆಲೆಯಿಂದ ಕೂಡಿದ್ದಾಗಿದೆ.

ನಾಗಪ್ಪನಿಗೆ 'ಶಿಕಾರಿ'ಯ ಅನುಭವ ಕಂಪನಿಯಿಂದ ಆಕಸ್ಮಿಕವಾಗಿ ಬಂದ ಸಸ್ಪೆಂಡ್ ಆದೇಶದೊಂದಿಗೆ ಆರಂಭಗೊಂಡು ಮುಂದೆ, ಬೇಟೆಗೊಳಗಾದ ಪ್ರಾಣಿಯ ಅಸಹಾಯಕ ತಬ್ಬಲಿತನ, ಭಯಗಳ ಅನುಭವ, ಅದರ ತೀವ್ರತೆ ದಟ್ಟವಾಗುತ್ತ

ಸಾಗುತ್ತದೆ. ಅಂತಿಮವಾಗಿ, ತನ್ನನ್ನು ಸುತ್ತುವರಿದ 'ಬೇಟೆಯ ವರ್ತುಲ'ದ ಪೂರ್ಣಗೊಂಡ ದರ್ಶನವನ್ನು ಆತ ಕಾಣುವುದು. ತನ್ನೆದುರು ತೆರೆದುಕೊಂಡ ವಿಚಾರಣೆಯ ಸನ್ನಿವೇಶದಲ್ಲಿ.

ಹನೇಹಳ್ಳಿಯ ಶ್ರೀನಿವಾಸ, ಅವನ ತಾಯಿ ಪದ್ದಕ್ಕನಿಂದ ತೊಡಗಿ ಪತ್ರಿಕಾ ಸಾರಾಂಶ ಸೀತಾರಾಮ, ತನ್ನ ಮುಂಬೈ ನಿವಾಸದ ಬಾಳಿನ ಸುತ್ತ ತುತ್ತೂರಿ ಜಾನಕಿ, ಅವಳ ಗಂಡನಂತಹವರು, ಈಗ ಸತ್ತು ಹೋದ ನಾಗವೇಣಿ, ಪರಿಚಿತ ಇನ್ನಾ, ಊಟ, ಕಾಫಿಗೆ ತೆರಳುವ ಪರಿಚಿತ ಕಾಮತರು ಹೋಟೆಲಿನಂತವರು; ತನ್ನ ಕಂಪನಿಯ ದೇವೀರಿ, ಪ್ರಭಾಕರ; ಇನ್ನೂ ಯಾವ ಸಂಬಂಧವೂ ಇಲ್ಲದೆ. ಆಕಸ್ಮಿಕ ಬೇಟೆಯಾದ ಫ್ರೇಟೆ, ಡಯಾನಾ ಇಂತಹವರೆಲ್ಲ ನಾಗಪ್ಪನನ್ನೂ 'ಶಿಕಾರಿ'ಯಾಡುವ ಬೇಟೆಗಾರರ ಸಂಬಂಧದಲ್ಲಿ, ಆ ವರ್ತುಲದ ಆವೃತ್ತಿಯಲ್ಲಿ ಹೇಗೋ ಅವನ ಅರಿವಿಗೂ ಬಾರದ ಸಂಬಂಧಗಳ ಕೊಂಡಿಯಲ್ಲಿ ಒಬ್ಬರೊಬ್ಬರು ಬೆಸೆದುಕೊಳ್ಳುತ್ತಾರೆ. ಹಾಗೆ ಹೇಳುವುದಾದರೆ ನಾಗಪ್ಪನನ್ನು ಬೇಟೆಯಾಡುವುದರ ಹೊರತು, ಅವರ ಬದುಕಿಗೆ ಬೇರೆ ಗುರಿ, ದಾರಿ, ಸಂತೋಷ, ಹೆಮ್ಮೆಗಳೇ ಇಲ್ಲದಂತೆ ಈ ಇವರೆಲ್ಲರೂ ಈ ಕ್ರಿಯೆಯಲ್ಲಿ ಪಾಲ್ಗೊಳ್ಳುತ್ತಾರೆ.

'ವ್ಯಕ್ತಿವಾದ' ಸಿದ್ಧಾಂತ ನೆಲೆಯಲ್ಲಿ ಕೃತಿಯೊಂದನ್ನು ಪ್ರಸ್ತುತಪಡಿಸುವುದಕ್ಕೆ ಪೂರಕವಾದ ಸ್ಥಿತಿ ಭಾರತದಲ್ಲಿರುವುದೂ ಚಿತ್ತಾಲರಿಗೆ ವ್ಯಕ್ತಿವಾದದ ಹಿನ್ನೆಲೆಯಲ್ಲಿ ವ್ಯಕ್ತಿಯನ್ನು ಬಗೆಯುವುದಕ್ಕೆ ಪೋಷಕವಾದ ವಿಚಾರವೇ ಆಗಿದೆ. ಭಾರತದಲ್ಲಿ ವ್ಯರ್ಥವಾದ ಹೆಮ್ಮೆ, ಸೊಕ್ಕುಗಳಿಗೆ; ಅಂತೆಯೇ ವ್ಯಕ್ತಿಯೊಬ್ಬ ಕೀಳರಿಮೆಯಿಂದ ನರಳುವುದಕ್ಕೆ ಬಹಳ ಮುಖ್ಯವಾದ ಮತ್ತು ಅಷ್ಟೇ ವ್ಯರ್ಥವಾದ ಕಾರಣ ಅವನ ಹುಟ್ಟು ಮತ್ತು ಜಾತಿಯಾಗಿದೆ.

ಹುಟ್ಟು, ಜಾತಿ ಮತ್ತು ಬಾಲ್ಯದ ಬಡತನದ ಅಸಹಾಯಕ ಅನುಭವಗಳು ನಾಗಪ್ಪನನ್ನು ಪದೇ ಪದೇ ಶಿಕಾರಿಗೊಳಪಡಿಸುವ ಸಾಧನವಾಗುತ್ತದೆ. ಶ್ರೀನಿವಾಸ-ಪದ್ದಕ್ಕನಂತಹವರಿಗೆ ತಮ್ಮ ದೌರ್ಬಲ್ಯ ವ್ಯರ್ಥ ಸೊಕ್ಕುಗಳ ಟೊಳ್ಳುತನವನ್ನು ಮರೆಮಾಡಲು, ವಾಗ್ವಿತ್ತು, ಬಾಲ್ಯದ ಹುಟ್ಟು ಜಾತಿ, ಅಸಹಾಯಕ ಅನುಭವಗಳೇ ಆಯುಧಗಳಾಗುತ್ತವೆ. ಬಾಲ್ಯದ ಅನುಭವಗಳಿಗೆ ಮನೋವಿಶ್ಲೇಷಣಾತ್ಮಕ ರೀತಿಯಲ್ಲಿ ಮುದುಡುವುದು, ನರಳುವುದು 'ನಾಗಪ್ಪ'ನ ಸ್ವಭಾವವಾದರೆ, ಶ್ರೀನಿವಾಸ-ಅದೇ ಬಾಲ್ಯದ ಅನುಭವಗಳೊಂದಿಗೆ ಎಲ್ಲ ರೀತಿಯ ನೈತಿಕ ಸಂವೇದನೆಗಳನ್ನೂ ನೈತಿಕ ಪ್ರಜ್ಞೆಗಳನ್ನು ನಿರ್ಲಕ್ಷಿಸುವ ತನ್ನ ಟೊಳ್ಳು ವ್ಯಕ್ತಿತ್ವದಿಂದಲೇ ಎಲ್ಲರ ಅಸ್ತಿತ್ವವನ್ನು ನಾಶಗೊಳಿಸುವವನಾಗಿ ಕಾಣಿಸಿಕೊಳ್ಳುತ್ತಾನೆ. 'ಶಿಕಾರಿ'ಯಲ್ಲಿ ಎಲ್ಲ ವ್ಯಕ್ತಿಗಳ, ಸನ್ನಿವೇಶಗಳ ಆಕ್ರಮಣಗಳಿಗೆ ಭಯಗೊಳ್ಳುವವನೂ, ತುತ್ತಾಗುವವನೂ ಆಗಿ ನಾಗಪ್ಪ

ಕಾಣಿಸಿದರೆ, ಇತರರೆಲ್ಲರೂ 'ನಾಗಪ್ಪನೆಂಬ ಈ ಮನುಷ್ಯ ಪ್ರಾಣಿಯನ್ನು ಅದೊಂದು ವರ್ತುಲದಲ್ಲಿ ಮತ್ತು ಆತನನ್ನು ಬೇಟೆಯಾಡುವುದಕ್ಕೆ ಆ ವರ್ತುಲವನ್ನು ರಚಿಸುವ ಕೊಂಡಿಗಳಾಗಿ ಸೇರಿಕೊಂಡು ನಾಗಪ್ಪನನ್ನು ಶಿಕಾರಿಗೊಳ್ಳುವ ಬೆದರಿಕೆಯಾಗಿ ಅವನನ್ನು ಭಯಗೊಳಿಸುತ್ತ ದಿಗಿಲುಗೊಳಿಸುವ ತಾವು ಅದರಿಂದ ಖುಷಿಗೊಳ್ಳುತ್ತಿರುವಂತೆ ಮತ್ತೆ ನಾಗಪ್ಪನಿಗೆ ಕಾಣಿಸಿಕೊಳ್ಳುತ್ತಾ ಆ ಭಯದ ಮೂಲಕವೇ ನಾಗಪ್ಪನನ್ನು ಬೇಟೆಯಾಡುತ್ತಾರೆ.

ಭಾರತ ಎರಡು ವಿರುದ್ಧ ಜಗತ್ತುಗಳನ್ನೊಳಗೊಂಡ ಸಮಾಜದಲ್ಲಿ ಬದುಕುತ್ತಿರುವ ದೇಶ. ಕಾರ್ಪೋರೇಟ್ ಜಗತ್ತಿಗೆ ಯಾವುದೇ ರೀತಿಯಲ್ಲೂ ಅರ್ಥಾತ್ ಸಂಬಂಧವಿಲ್ಲದ ಮತ್ತು ಪ್ರಯೋಜನವಿಲ್ಲದ ಜಾತಿ, ಹುಟ್ಟುಗಳೂ ಅಲ್ಲಿ ನಾಗಪ್ಪ ಅಥವಾ ನಾಗಪ್ಪನಂತಹ ಮನುಷ್ಯ ಜೀವಿಯನ್ನು ಬೇಟೆಯಾಡಲು ಪ್ರಾಮುಖ್ಯವನ್ನು ಪಡೆಯುತ್ತವೆ. ಸ್ವತಹ ನಾಗವೇಣಿಯ ಸಾವಿನ ನೈತಿಕತೆಯ ಭಾರವನ್ನು ಹೊರಲು ಧೈರ್ಯವಿಲ್ಲದ ಶ್ರೀನಿವಾಸನಂತಹ ಭಂಡನೂ, ನಾಗಪ್ಪನ ಹುಟ್ಟು, ಜಾತಿಗಳ ಮೂಲಕ ಅವನನ್ನು 'ಶಿಕಾರಿ'ಯಾಗಲು ತೊಡಗುತ್ತಾನೆ. 'ನಾಗಪ್ಪ'ನ ಹುಟ್ಟು, ಜಾತಿ, ಬಡತನ, ಅಸಹಾಯಕತೆ, ಬಾಲ್ಯದ ಬಿಡಾಡಿಗಳು; ಆ ಮೇಲಿನ ಸ್ನೇಹಿತರು, ಪರಿಚಿತರು, ನೆರೆಹೊರೆಯವರು; ಕಂಪನಿಯ ಮೇಲು ಕೆಳಗಿನ ಎಲ್ಲ ಸಹೋದ್ಯೋಗಿಯರು, ಕೊನೆಗೆ ಅವನ ಲೈಂಗಿಕ ಸಹಚರಿ, ಸ್ನೇಹಿತೆ, ನಂಬಿಗಸ್ಥಳೂ ಆದ ಮೇರಿ – ಹೀಗೆ ಎಲ್ಲರೂ ನಾಗಪ್ಪನನ್ನು ಬೇಟೆಯಾಡುವ ಕ್ರೂರ ಸಂತೋಷದಲ್ಲಿ ಕ್ರಿಯಾಶೀಲರಾಗಿದ್ದಾರೆ. ಈ ಅರಿವು ವ್ಯಕ್ತಿಗೆ ತನ್ನ ಅಸ್ತಿತ್ವದ ಕುರಿತಾದ ತೀವ್ರ ಭಯ ಮತ್ತು ಅಷ್ಟೇ ತೀವ್ರವಾಗಿ ಅವನನ್ನು ತನ್ನ ಅಸ್ತಿತ್ವದ ಅರ್ಥ, ಉದ್ದೇಶ, ಸಾರ್ಥಕತೆಯನ್ನು ಪ್ರಶ್ನೆಯೆಡೆಗೆ ಮುಖಾಮುಖಿಯಾಗಿಸಿದೆ. ನಾಗಪ್ಪನನ್ನು ಈ ಪರಿಸ್ಥಿತಿ ಮತ್ತು ಸ್ಥಿತಿ ತೀವ್ರ ಒಂಟಿತನದ ಅಸಹಾಯಕತೆ ಹಾಗೂ ತಬ್ಬಲಿಯೆಡೆಗೆ ಗುರಿಯಾಗಿದೆ. ತನ್ನವರು ಇಲ್ಲಿ ಯಾರು ತನ್ನವರು ಎಂದು ತಿಳಿದುಕೊಂಡವರೆಲ್ಲ ತನ್ನನ್ನು ಶಿಕಾರಿಯಾಡುವ ವ್ಯಕ್ತಿಗಳಾಗಿ ಪರಿವರ್ತಿತರಾಗಿ ಕಾಣಿಸಿಕೊಂಡಾಗ, ತನ್ನನ್ನು ಯಾರೂ ಪ್ರೀತಿಸುತ್ತಿಲ್ಲ! ಎನ್ನುವ ಭಯಾನಕ ಅರಿವು ಮೂಡುತ್ತಿದೆ. ಈ ಅರಿವಿನಲ್ಲಿ, ತನ್ನ ಅಸ್ತಿತ್ವ, ಅಸ್ಮಿತೆಯನ್ನು ಎಲ್ಲರೂ ನಿರಾಕರಿಸುವ ಈ ಅರಿವಿನಲ್ಲಿ ನಾಗಪ್ಪ ದಿಗಿಲುಗೊಳ್ಳುತ್ತಾನೆ. ಆಧುನಿಕ ವ್ಯಾಪಾರಿ ಜಗತ್ತು ಆತನಿಗೆ ಖಂಬಾರ, ಹೀರೋಜ್, ದಸ್ತೂರ, ಪಟೇಲ – ಇವರ ಮೂಲಕ ಮುಖಾಮುಖಿಯಾಗುತ್ತದೆ. ವ್ಯಾಪಾರಿ ಜಗತ್ತಿನ ಪ್ರತಿನಿಧಿಗಳಾದ ಇವರು, ನಾಗಪ್ಪ ತಾನು ತನ್ನನ್ನು ಸತ್ಯವೆಂದು ತಿಳಿದುಕೊಂಡ ಎಲ್ಲವನ್ನು 'ಸುಳ್ಳಾಗಿ' ಪ್ರದರ್ಶಿಸುವಾಗ, ವ್ಯಾಪಾರಿ ಜಗತ್ತಿನಲ್ಲಿ ಹೀಗೆ ಸತ್ಯ ಸುಳ್ಳಾಗಿಯೂ ತನ್ನನ್ನು ಬಿಂಬಿಸುವ ಪರಿಗೆ ನಾಗಪ್ಪ ದಿಗ್ಭ್ರಮೆಗೊಳ್ಳುತ್ತಾನೆ. ಇಲ್ಲಿಯವರೆಗೂ ನಾಗಪ್ಪನಿಗೆ ತನ್ನ ಬಗ್ಗೆ ನಂಬಿಕೆ ಇತ್ತು. ತನ್ನ ಬುದ್ಧಿವಂತಿಕೆ, ಕ್ರಿಯಾಶೀಲತೆ, ತಾಂತ್ರಿಕ ನೈಪುಣ್ಯ – ಕಂಪನಿಗೆ

ಅನಿವಾರ್ಯ ಎಂದು ತಿಳಿದು; ಆ ತಿಳಿದೇ ಅವನಿಗೆ ವಿಶೇಷ ಧೈರ್ಯವನ್ನು ಕೊಟ್ಟಿತ್ತು.

ಆದರೆ, ತನ್ನ ವಿಚಾರಣೆಯ ಈ ಮುಖಾಮುಖಿಯಲ್ಲಿ ವ್ಯಾಪಾರಿ ಜಗತ್ತಿನ ಕ್ರೂರಸತ್ಯಗಳನ್ನು ತಿಳಿಯುತ್ತ ಆತ ಬೆಚ್ಚಿಬಿದ್ದ. ವ್ಯವಹಾರಿಕ ಜಗತ್ತಿಗೆ, ಈ ಕಂಪನಿಗೆ ತನ್ನ ಪ್ರತಿಭೆ, ತನ್ನ ಸೇವೆ, ದಕ್ಷತೆ, ನಂಬುಗೆಯ ಕಾರ್ಯ ನಿರ್ವಹಣೆ – ಯಾವುದೂ ಮುಖ್ಯವಲ್ಲ; ತಾನೂ, ತನ್ನಂತಹವರೂ 'ಕಂಪನಿ'ಗೆ; ಆ ಮೂಲಕ ವ್ಯಾಪಾರಿ ಜಗತ್ತಿಗೆ ಮುಖ್ಯವೇ ಅಲ್ಲದಿರುವಾಗ ತನ್ನ ಅಸ್ತಿತ್ವದ ಅರ್ಥ ಏನು? ತನ್ನ ಮತ್ತು ತಾನು ಗಳಿಸಿಕೊಂಡ ಇಷ್ಟು ವರ್ಷಗಳ ಬುದ್ಧಿವಂತಿಕೆ, ಸೇವೆ, ದಕ್ಷತೆ, ನಂಬುಗೆ, ಕಾರ್ಯನಿರ್ವಹಣೆ, ನಿಷ್ಠೆಗಳ ಅರ್ಥ, ಅಗತ್ಯ ಏನು? ಇದಾವುದೂ ಮುಖ್ಯವೇ ಅಲ್ಲದಿರುವ ಕಂಪನಿಗೆ 'ಸತ್ಯ'ದಂತೆಯಷ್ಟೇ ಕಾಣಿಸುವ 'ಸುಳ್ಳು'ಗಳೇ ಮುಖ್ಯವಾದ ಕಂಪನಿಗೆ, ಖಂಟಾಟ, ಫಿರೋಜರನ್ನೇ ರಕ್ಷಿಸುವ ಅಗತ್ಯವುಳ್ಳ ವ್ಯಾಪಾರಿ ಜಗತ್ತಿಗೆ ತಾನು ನಂಬಿರುವ ಮೌಲ್ಯಗಳೇ ಅಪಮೌಲ್ಯಕ್ಕೊಳಪಟ್ಟಾಗ, ಅನೈತಿಕತೆಯೇ ಅಲ್ಲಿ ನೈತಿಕತೆಯಾದಾಗ ಇಲ್ಲಿ ತನ್ನ ಇರುವಿಕೆ ಅಪ್ರಸ್ತುತ ಎನ್ನುವ ಸತ್ಯ ಭಯಾನಕವಾಗಿ ಅರಿವಾಗುತ್ತದೆ.

ತನ್ನ ವಿಚಾರಣೆಯ ನಾಟಕದಲ್ಲಿ ಪಾಲ್ಗೊಳ್ಳಲು ತಾಜ್‌ಹೋಟೆಲಿಗೆ ತೆರಳುವ ನಾಗಪ್ಪ ಮುಂದಿನ ಕನ್ನಡಿಯಲ್ಲಿ ತನ್ನ ಮುಖವನ್ನು ಕಾಣುತ್ತಾನೆ, "ಅದೇ ಮೋರೆ, ತನ್ನದಾಗಿಯೂ ಬೇರೆಯೇ ಒಬ್ಬನದಾಗಿ ತೋರಿದ್ದು! ಅದರ ಕಣ್ಣುಗಳಲ್ಲಿ ಮೂಡಿದ ನಿಷ್ಪಾಪ ಮುಗ್ಧತೆ ನಾಗಪ್ಪನನ್ನು ಎಷ್ಟೊಂದು ಆಶ್ಚರ್ಯಗೊಳಿಸಿ ಕಲಕಿ ಬಿಟ್ಟಿತ್ತೆಂದರೆ ಅದರಿಂದ ಹುಟ್ಟಿದ ಅಂತರ್ಮುಖತೆಯಿಂದ ಹೊರಗೆ ಬರಲು ಬಹಳ ಹೊತ್ತ ಹಿಡಿಯಿತು . . ." (ಪು. ೧೮೬, ಶಿಕಾರಿ).

ಹೀಗೆ ನಾಗಪ್ಪನಿಗೇ ಕಾಣಿಸಿದ ನಾಗಪ್ಪನಿಗೆ, ಅರ್ಥವಾದ ಅರಿವು ಇದಾಗಿದೆ, "ಆದರೆ ಹೈದರಾಬಾದಿನ ಫ್ಯಾಕ್ಟರಿಯಲ್ಲೇ ತನ್ನ ಬಗ್ಗೆ ಸಹಾನುಭೂತಿ ಇದ್ದ, ಆದರವಿದ್ದ (ಕೆಲವೊಂದು ಭಾವನಾತ್ಮಕ ಗಳಿಗೆಗಳಲ್ಲಿ ಇದನ್ನೇ ಪ್ರೀತಿಯೆಂದು ಕೂಡ ತಿಳಿದ) ಒಂದೇ ಒಂದು ವ್ಯಕ್ತಿ ಎಂಬ ತಿಳುವಳಿಕೆಗೆ ಕಾರಣಗಳಾದ ರೀನಾ ಫಿರೋಜನ ಪಿತೂರಿಯಲ್ಲಿ? . . . . ನಾಗಪ್ಪ ನಂಬದಾದ ಯಾಕೆಂದರೆ ನಂಬುವ ಧೈರ್ಯವಾಗಲಿಲ್ಲ. ರೀನಾಳಂಥ ರೀನಾ ಕೂಡ ಸುಳ್ಳಾಗುವುದು ಶಕ್ಯವಿದ್ದರೆ ತಾನು ತೊಡಗಿಸಿಕೊಂಡ ಈ ಪ್ರತಿಭಟನೆಗೆ ಯಾವ ಅರ್ಥವೂ ಉಳಿಯಲಿಲ್ಲ..." (ಪು. ೨೦೧, ಶಿಕಾರಿ).

"...ಹೀಗೆ ತನಗೆ ಎರಡು ಬಗೆದದ್ದು ತಿಳಿದು ಸಿಟ್ಟು ಬರದೇ ಇದ್ದದು ಮುಂದೆ, ... ಮನುಷ್ಯ ಸಂಬಂಧಗಳ ಸತ್ಯವನ್ನು ತಿಳಿಯುವ ಶಕ್ತಿಯೇ ತನ್ನಲ್ಲೀಗ ಉಳಿದಿಲ್ಲವೇನೋ ಎಂಬಂತಹ ತಟಸ್ಥ ಭಾವನೆಯಿಂದಲೇ" ಎಂಬ ಅರಿವಿಗೆ ಬರುತ್ತಾನೆ. ಮನುಷ್ಯನ ಒಳ್ಳೆಯತನದಲ್ಲಿ ಅಥವಾ ಅದರಲ್ಲಷ್ಟೇ ನಂಬಿಕೆಯಿದ್ದ ಈ

ತಿಳಿವಿಗೆ, ಅಥವಾ ನಾಗಪ್ಪನಿಗೆ ಸತ್ಯವಾಗಲಿ, ಸಂಬಂಧಗಳಾಗಲಿ ಅಥವಾ ಘಟನೆ, ಸನ್ನಿವೇಶಗಳಾಗಲಿ ಸರಳವಾಗಿ ಇರುವುದಿಲ್ಲ; ಅದು ಸಂಕೀರ್ಣವಾದದ್ದು ಎನ್ನುವುದು ಅರಿವಿಗೆ ಬರುತ್ತದೆ. ಈ ಸಂಕೀರ್ಣವಾದ, ತನ್ನ ಸುತ್ತ ಬಲೆಯ ಸ್ವರೂಪದಲ್ಲಿ ಹೆಣೆದ ಈ ಸಂಬಂಧ, ಸನ್ನಿವೇಶಗಳ, ಶಿಕಾರಿಯ ವರ್ತುಲದಲ್ಲಿ ತಾನು ಶಿಕಾರಿಗೆ ಒಳಗಾದ ಬಲಿಪಶು! ಎನ್ನುವ ಅರಿವು ವ್ಯಕ್ತಿಗೆ ಧೈರ್ಯ ಅಥವಾ ಆನಂದ ತರುವ ಅರಿವಾಗಿರಲೇ ಇಲ್ಲ.

“ಮಾನವನಾಗಿ ಅರಳುತ್ತಾನೋ, ಕಾಯಂ ಆಗಿ ಮುರುಟಿಹೋಗುತ್ತಾನೋ ಎನ್ನುವುದು ಕೊನೆಯಲ್ಲಿ ಈ ಸಾಮಾಜಿಕ ಸನ್ನಿವೇಶವನ್ನೇ ಅವಲಂಬಿಸಿದ್ದು, ಮಾನವನ ಮೂಲ ಸ್ವಭಾವದಲ್ಲೇ ಇದ್ದ ಯಾವ ಒಂದು ಮೂಲಭೂತ ಶಕ್ತಿಯನ್ನು ಇದಿರಿಸಬೇಕಾಗುತ್ತದೆ ಎನ್ನುವುದರ ಮೇಲೆ ನಿಂತದ್ದು. ಜೀವೋತ್ಕರ್ಷಯಾದ ಪ್ರೀತಿಯನ್ನೋ? ಸಾವಿನ ಪ್ರತಿನಿಧಿಯಾದ ದ್ವೇಷವನ್ನೋ?” ಕಾದಂಬರಿ ವ್ಯಕ್ತಿವಾದದ ನೆಲೆಯಲ್ಲಿ (ಪು. ೨೬, ಶಿಕಾರಿ) ವ್ಯಕ್ತಿತ್ವದ ಅಂತಃಸತ್ವವನ್ನು, ಅವನನ್ನು ರೂಪಿಸುವ ಸಮಾಜದ ಅಂತಃಸತ್ವವನ್ನು ಔದ್ಯೋಗೀಕರಣದ ವ್ಯಾಪಾರಿ ಜಗತ್ತಿನ ಆಧುನಿಕ ಸಮಾಜದ ನೆಲೆಯಲ್ಲಿ ಅನ್ವೇಷಿಸುವುದು ಅದರ ಉದ್ದೇಶವಾಗಿದೆ. “ಶ್ರೀನಿವಾಸ ಹಾಗೂ ಫಿರೋಜ್ ಇವರು ನನ್ನನ್ನು ಇಷ್ಟೊಂದು ದ್ವೇಷಿಸಲು ಕಾರಣವೇನು? ಹುಡುಕಬೇಕು” (ಪು. ೨೬, ಶಿಕಾರಿ) – ಈ ಸನ್ನಿವೇಶ ಕಥನದ ಮೂಲಕ ವ್ಯಕ್ತಿಯ ಮೂಲ ನೆಲೆಯನ್ನು ಶಿಕಾರಿ ಬಗೆಯಲು ಹೊರಡುತ್ತದೆ.

“ಪ್ರೀತಿ, ಆದರ, ಕಾಳಜಿ, ನಿಸ್ವಾರ್ಥ ಇವೇ ಮೊದಲಾದ ಮಾನವೀಯ ಭಾವನೆಗಳಿಗೆ ಅರ್ಥವೇ ಇಲ್ಲವೇ? ಅವನ ವಿವೇಕಕ್ಕೆ? ನ್ಯಾಯಬುದ್ಧಿಗೆ? ನೀತಿಗೆ?” (ಪು. ೩೧೧ ಶಿಕಾರಿ) ಸಾಹಿತ್ಯದ ಉದಾರತೆ, ಅದರ ಸೌಂದರ್ಯ ಬುದ್ಧಿ ಬಹುಶಃ ಇಷ್ಟನ್ನೇ ಅನ್ವೇಷಿಸಿದರೆ; ಮತ್ತು ವೈಭವೀಕರಿಸಿಯೂ ಇದೆ. ಆದರೆ ಕಾದಂಬರಿಯಲ್ಲಿ ಬರುವ ಮುಂದಿನ ಗಿಲ್ಬರ್ಟ್‌ನ ಮಾತಿನಂತೆ, “ನೀನು ಈ ಮಾನವ ಪ್ರಾಣಿಯ ಸಾಧ್ಯತೆಗಳ ಬಗ್ಗೆ ಅವಾಸ್ತವ ಕಲ್ಪನೆ ಮಾಡಿಕೊಂಡಿದ್ದು ನಿಜವಾದ ಹೋರಾಟದ ಬಿಸಿ ನಿನಗೆ ತಾಕಲೇ ಇಲ್ಲ” (ಪು. ೩೧, ಶಿಕಾರಿ) ಎನ್ನುವಂತೆ ಸಾಹಿತ್ಯದ ವ್ಯಾಖ್ಯಾನಗಳ ದಾರಿಯನ್ನು ಮಾರಿ ಈ ಕಾದಂಬರಿ ಮಾನವ ಸಮಾಜದ ಸಂಬಂಧಗಳ ನಿಜದ ನೆಲೆಯನ್ನು ಅನ್ವೇಷಿಸುವುದಕ್ಕೆ ತೊಡಗುತ್ತದೆ. ಹೀಗೆ, ಮನುಷ್ಯ ಸ್ವಭಾವದ ನಿಷ್ಠುರ ಸತ್ಯವನ್ನು ಕಾಣುವ ಕ್ರಿಯೆಗೆ ‘ಶಿಕಾರಿ’ ತನ್ನನ್ನು ಒಡ್ಡಿಕೊಳ್ಳುತ್ತದೆ. ಆಗ ಮನುಷ್ಯನ ಸ್ವಭಾವದ ಮೂಲದಲ್ಲಿ ಮಾನವೀಯತೆಯ ಬದಲಾಗಿ ಕಾಣುವುದು. ಸ್ವಾರ್ಥ, ಕ್ರೌರ್ಯ, ಅಧಿಕಾರ, ದಾಹ, ಸಂಪತ್ತಿನ ಅತೀವ ಮೋಹ... ಇತ್ಯಾದಿ ಸ್ವಭಾವಗಳು ನಾಗಪ್ಪ ಗಿಲ್ಬರ್ಟ್‌ನ ಮಾತುಗಳನ್ನೇ ವ್ಯಾಖ್ಯಾನಿಸಿದಂತೆ, ನಮ್ಮ ಎಲ್ಲ ವ್ಯವಹಾರಗಳ ಅಡಿಯಲ್ಲಿ, ಸಾಮಾಜಿಕ ನಡವಳಿಕೆಯ ಕೆಳಗೆ ಕೆಲಸ ಮಾಡುವ ಶಕ್ತಿಯೊಂದೇ

ಸ್ವಾರ್ಥ. ತನ್ನೊಬ್ಬನ ಹಿಡಿತವನ್ನು ರಕ್ಷಿಸಿಕೊಳ್ಳುವ ಭರದಲ್ಲಿ ಉಳಿದವರನ್ನು ಬಲಿಕೊಡಲು ಹಿಂತೆಗೆಯದ ಸ್ವಾರ್ಥ. ಮಾನವ ಸಮಾಜದಲ್ಲಿಯ ಅಸಮಾನತೆ ನಿಮ್ಮ ಮಾರ್ಕ್ಸ್ವಾದಿಗಳು ತಿಳಿದುಕೊಂಡಂತೆ ಬರಿಯ ಪ್ರಾಪರ್ಟಿಯ ಹಂಚಿಕೆಯ, ಜೀವನೋಪಾಯಗಳ ಹಂಚಿಕೆಯ ಅಸಮಾನತೆಯಲ್ಲಿಲ್ಲ; ಕೀರ್ತಿಯ, ಹೆಸರಿನ ಗಳಿಕೆಯ ಅಸಮಾನತೆಯಲ್ಲೂ ಇದೆ. ವಿಚಾರ ಮಾಡಿ ನೋಡು, ಸಮಾಜ ಹುಟ್ಟಿಸುವ ಸರ್ಪ್ಲಸ್ಸು ಬರಿಯ ಉತ್ಪಾದನೆಗೆ ಸೀಮಿತವಾದದ್ದೇ?... ಒಂದು ಸಣ್ಣ ಸಂಸ್ಥೆಯ ಕೆಲಸವನ್ನು ನಿನಗೆ ತೋರಿಸುತ್ತೇವೆ. ಅಲ್ಲಿ ಕಂಡವರ ನೋವನ್ನು, ಅದನ್ನು ಇದಿರಿಸುವಲ್ಲಿ ಅವರು ತೋರಿಸುವ ಎದೆಗಾರಿಕೆಯನ್ನು ಚಿತ್ರಿಸುವ ತಾಖತ್ತು ನಿನಗೆ ಬಂದಾಗ ಬರೆ–ಕಾದಂಬರಿಯನ್ನೋ, ಕತೆಯನ್ನೋ, ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ನಿನ್ನ ಹೆಸರನ್ನುಳಿಸಲಿಲ್ಲ. ಸಾವನ್ನು ಗೆಲ್ಲಲು ಅವರು ನಡೆಸಿದ ಆರೋಗ್ಯವಂತ ಹೋರಾಟವನ್ನು ಉಳಿದವರಿಗೆ ತಿಳಿಸಲು'' (ಪು. ೩೨ ಶಿಕಾರಿ) ಕಾದಂಬರಿಯ ನಿರೂಪಕ ತನ್ನ ಕೃತಿಯ ಆಶಯ, ಉದ್ದೇಶಗಳನ್ನು ಹೀಗೆ ವಿವರಿಸುತ್ತಾ ನಾಗಪ್ಪ ತನ್ನ ಔದ್ಯೋಗಿಕ ವಲಯದ ತನ್ನ ಮೇಲೆ ತನ್ನವರೂ, ಸುತ್ತಲಿನವರೂ, ಸರ್ವರೂ ನಡೆಸಿದ 'ಶಿಕಾರಿ'ಯ ಆಕ್ರಮಣ, ಕ್ರೌರ್ಯಗಳನ್ನು ತನ್ನ ಸಾವಿನಂತಹ ಹತಾಶೆಯಲ್ಲಿ ಮೀರಿದ ಎದೆಗಾರಿಕೆಯನ್ನು ಕಾದಂಬರಿ ವಿವರ ವಿವರವಾಗಿ ವಿವರಿಸುತ್ತದೆ.

**ಸಮಾರೋಪ:**

ಆದ್ದರಿಂದ ನಾಗಪ್ಪನ ದಾರಿ ಅಲ್ಲೇ ಅಂತಿಮಗೊಳ್ಳುವುದಿಲ್ಲ. ಅದು ಮುಂದೆ, ''ನನ್ನ... ಮಟ್ಟಿಗೆ... ಇನ್ನೂ. ಕಂಡಿರದ... ಅಣ್ಣನನ್ನು... ಕಾಣೆಯಾದ... ತಂಗಿಯನ್ನೂ ಹುಡುಕಿ ತೆಗೆಯುವುದೇ... ನನ್ನ.. ಇನ್ನು ಮುಂದಿನ... ಆಯುಷ್ಯದ... ಗುರಿಯಾಗಬೇಕು'' (ಪು. ೨೪೮, ಶಿಕಾರಿ). ಹೀಗೆ ಸುತ್ತಲಿನ ಕ್ರೌರ್ಯವನ್ನು ಬಗೆದು, ಅದಕ್ಕೆ ಮುಖಾಮುಖಿಯಾದ ನಾಗಪ್ಪ, ತನ್ನ ಮುಂದಿನ ಆಯುಷ್ಯವನ್ನು ತನ್ನ ಬಾಲ್ಯದೊಂದಿಗೆ ತುಳಿದು ಹಾಕಲ್ಪಟ್ಟ ಮಾನವೀಯತೆಯ, ಬಾಂಧವ್ಯದ ನೆಲೆಯನ್ನು ಹುಡುಕುವುದನ್ನೇ ಬದುಕಿನ ದಾರಿಯಾಗಿ ಕಂಡುಕೊಳ್ಳುತ್ತಾನೆ.

**ಪರಾಮರ್ಶನ ಗ್ರಂಥಗಳು:**


1. ರಾಜೇಂದ್ರ ಚೆನ್ನಿ (ಸಂ), (೧೯೯೬), ಯಶವಂತ ಚಿತ್ತಾಲರ ಸಾಹಿತ್ಯ ಲೋಕ, ಪ್ರಿಸಮ್ ಬುಕ್ಸ್ ಪ್ರೈ.ಲಿ., ಬೆಂಗಳೂರು.
2. ಹಳ್ಳಿಕೇರಿ ಎಫ್.ಟಿ., (1995), ಯಶವಂತ ಚಿತ್ತಾಲ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
3. ಹೆಗಡಿ ವಿ.ಡಿ., (2007೦, ಯಶವಂತ ಚಿತ್ತಾಲ, ಚೇತನ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್, ಮೈಸೂರು.
4. ಸುರೇಶ ನಾರಾಯಣ ನಾಯ್ಕ, (2002), ಯಶವಂತ ಚಿತ್ತಾಲರ ಬದುಕು–ಬರಹ, ಸುವರ್ಣ ಪ್ರಕಾಶನ, ಹೊನ್ನಾವರ.
5. ಹೆಗಡೆ ಜಿ.ಎಂ. (ಸಂ.), (1999), ಸಾಹಿತ್ಯ ವಿಮರ್ಶೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
6. ಯಶವಂತ ಚಿತ್ತಾಲ, (2005), ಸಾಹಿತ್ಯ ಸೃಜನಶೀಲಿಕೆ ಮತ್ತು ನಾನು, ವಸಂತ ಪ್ರಕಾಶನ, ಬೆಂಗಳೂರು.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.